# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01.

ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:01:2021-22 ದಿನಾಂಕ:30ನೇ ಜೂನ್ 2022

**ಇವರಿಗೆ,**
ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ),

ಮಾನ್ಯರೆ,

ವಿಷಯ: ಖಾಸಗಿ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣ ಆನ್‌ಲೈನ್ ಮೂಲಕ ನಿರ್ವಹಿಸುವ ಬಗ್ಗೆ.
ಉಲ್ಲೇಖ: ಕರ್ನಾಟಕ ಶಿಕ್ಷಣ ಕಾಯ್ದೆ-1983. ಸೆಕ್ಷನ್-36
2] ಈ ಕಛೇರಿ ಸುತ್ತೋಲೆ ಸಂಖ್ಯೆಸಿ7[3]ಪ್ರಾಶಿಅ:ಖಾ.ಶಾ.ಮಾ.ನ:06: 2022-23 ದಿನಾಂಕ:23-05-2022
3] ಸರ್ಕಾರದ ಪತ್ರ ಸಂಖ್ಯೆ:ಇಪಿ:254.ಪಿಜಿಸಿ:2022, ದಿ:29.06.2022.

*****

ಮೇಲಿನ ವಿಷಯ ಹಾಗೂ ಉಲ್ಲೇಖದ ಪತ್ರಗಳಂತೆ ಖಾಸಗಿ ಅನುದಾನಿತ / ಅನುದಾನ ರಹಿತ ಶಾಲೆಗಳಲ್ಲಿ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದ ಪ್ರಾಧಿಕಾರಿಗಳು ಸಂಬಂಧಿಸಿದ ಶಾಲೆಗಳ ಮಾನ್ಯತೆ ನವೀಕರಣ ನೀಡಬೇಕಿರುತ್ತದೆ. ಉಲ್ಲೇಖ [2]ರಲ್ಲಿ ತಂತ್ರಾಂಶದ ಮೂಲಕ ಖಾಸಗಿ ಅನುದಾನಿತ/ಅನುದಾನ ರಹಿತ ಶಾಲೆಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆ ಪ್ರಮಾಣ ಪತ್ರವನ್ನು ಪಡೆದು ಮಾನ್ಯತೆ ನವೀಕರಣಕ್ಕಾಗಿ ದಿನಾಂಕ:27-06-2022ರೊಳಗಾಗಿ ಅರ್ಜಿ ಸಲ್ಲಿಸುವ ಶಾಲೆಗಳಿಗೆ ಮಾನ್ಯತೆ ನಿಯಮಾನುಸಾರ ನವೀಕರಿಸುವಂತೆ ಉಲ್ಲೇಖ(2)ರಲ್ಲಿ ತಿಳಿಸಲಾಗಿರುತ್ತದೆ.

ಅದರಂತೆ, ಎಲ್ಲಾ ಸುರಕ್ಷತಾ ಪ್ರಮಾಣ ಪತ್ರಗಳನ್ನು ಮತ್ತು ಇತರೆ ಷರತ್ತುಗಳನ್ನು ಪೂರೈಸಿರುವ ಶಾಲೆಗಳಿಗೆ ಮಾನ್ಯತೆಯನ್ನು ನವೀಕರಿಸಲಾಗುತ್ತಿದೆ.

ಆದರೆ, ಸುರಕ್ಷತಾ ಪ್ರಮಾಣ ಪತ್ರವನ್ನು ಖಾಸಗಿ ಅನುದಾನಿತ / ಅನುದಾರಹಿತ ಶಾಲೆಗಳ ಆಡಳಿತ ಮಂಡಳಿಗಳು ಸಕಾಲದಲ್ಲಿ ಪಡೆಯಲು ಸಾಧ್ಯವಾಗದೇ ಇರುವುದರಿಂದ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯ ಸಚಿವರ ಟಿಪ್ಪಣಿಯನ್ನು ಉಲ್ಲೇಖಿಸಿ ಸರ್ಕಾರವು ಉಲ್ಲೇಖ [3]ರ ಪತ್ರದಲ್ಲಿ ನೀಡಿರುವ ಆದೇಶದಂತೆ ಖಾಸಗಿ ಅನುದಾನಿತ/ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳು ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತೆ ಪ್ರಮಾಣ ಪತ್ರಗಳನ್ನು, ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದು ಸಲ್ಲಿಸುವ ಷರತ್ತಿನಂತೆ ಮುಚ್ಚಳಿಕೆ ಪ್ರಮಾಣ ಪತ್ರವನ್ನು (ನೋಟರಿ ಪ್ರಮಾಣ ಪತ್ರ) ಆನ್‌ಲೈನ್‌ನಲ್ಲಿ ಸಲ್ಲಿಸಿದ ಆಡಳಿತ ಮಂಡಳಿಗಳ ಶಾಲೆಗಳ

2022–23ನೇ ಸಾಲಿಗೆ [ಒಂದು ವರ್ಷದ] ಮಾತ್ರ ಸೀಮಿತಗೊಳಿಸಿ ಮಾನ್ಯತೆ ನವೀಕರಣವನ್ನು ನೀಡುವ ಸಂಬಂಧ ಕ್ರಮವಹಿಸಲು ಸೂಚಿಸಿದೆ. ಆದ್ದರಿಂದ ಶಾಲಾ ಮಾನ್ಯತೆ ನವೀಕರಣಕ್ಕೆ ಆಡಳಿತ ಮಂಡಳಿಗಳು ಅರ್ಜಿ ಸಲ್ಲಿಸುವ ಕೊನೆಯ (ಅಂತಿಮ) ದಿನಾಂಕವನ್ನು 28–07–2022ರವರೆಗೆ ವಿಸ್ತರಿಸಿದೆ ಮತ್ತು ಹಿಂದಿನ ಜ್ಞಾಪನಾ ಮತ್ತು ಸುತ್ತೋಲೆಗಳ ಷರತ್ತುಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ತಮ್ಮ ನಂಬುಗೆಯ

30/06/2022

**ಆಯುಕ್ತರು.**
**ಸಾರ್ವಜನಿಕ ಶಿಕ್ಷಣ ಇಲಾಖೆ.**

***ಪ್ರತಿಯನ್ನು ಮಾಹಿತಿಗಾಗಿ.***

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯ ಸಚಿವರ ಅವಗಾಹನೆಗೆ ತರುವಂತೆ ಕೋರಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. [ಇವರು ಎಲ್ಲಾ ಖಾಸಗಿ ಅನುದಾನರಹಿತ ಆಡಳಿತ ಮಂಡಳಿ ಹಾಗೂ ಅನುದಾನರಹಿತ ಶಾಲಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ತಲುಪಿಸುವುದು]
6. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.

## ರೂ. 100/-ಗಳ ಛಾಪಾ ಕಾಗದದಲ್ಲಿ ಪ್ರಮಾಣ ಪತ್ರದ ಮಾದರಿ [ನೋಟರಿ ಪ್ರಮಾಣ ಪತ್ರ]

01. ಮೊದಲನೇ ವ್ಯಕ್ತಿ – ಆಡಳಿತ ಮಂಡಳಿ

02. ಎರಡನೇ ವ್ಯಕ್ತಿ – ರಾಜ್ಯ ಸರ್ಕಾರ

### : ಪ್ರಮಾಣ ಪತ್ರ :

_____________ ತಂದೆ _____________ ವರ್ಷದ _________ ಆದ ನಾನು _____ ಆಡಳಿತ ಮಂಡಳಿಯ __________ ನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಆಡಳಿತ ಮಂಡಳಿಯಿಂದ ನಡೆಯುತ್ತಿರುವ __________ ಶಾಲೆಯ 2022-23ನೇ ಸಾಲಿನ ಮಾನ್ಯತೆ / ಮಾನ್ಯತೆ ನವೀಕರಿಸಲು ಅರ್ಜಿಯನ್ನು ಸಲ್ಲಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಹಾಗೂ ಸರ್ಕಾರದ / ಇಲಾಖೆಯ ಮಾರ್ಗಸೂಚಿಯಂತೆ ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದು ಶಾಲೆಯ ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

ಆದರೆ, ಶಾಲೆಯ ಕಟ್ಟಡ ಮತ್ತು ಅಗ್ನಿ ಸುರಕ್ಷತಾ ಪ್ರಮಾಣ ಪತ್ರಗಳನ್ನು ಪಡೆಯಲು ಈ ದಿನಾಂಕದವರೆಗೆ ಸಾಧ್ಯವಾಗದೇ ಇರುವುದರಿಂದ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಹಿತದೃಷ್ಟಿಯಿಂದ ಈ ವರ್ಷಕ್ಕೆ ಮಾತ್ರ ಸೀಮಿತಗೊಳಿಸಿ ನನ್ನ ಶಾಲೆಯ ಮಾನ್ಯತೆಯನ್ನು ತಾತ್ಕಾಲಿಕವಾಗಿ ಒಂದು ವರ್ಷಕ್ಕೆ ಮಾತ್ರ ನವೀಕರಿಸಿಕೊಡಬೇಕೆಂದು ಕೋರುತ್ತೇನೆ. ಹಾಗೂ ಸದರಿ ಪ್ರಮಾಣಪತ್ರಗಳನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪಡೆದು ಸಲ್ಲಿಸುತ್ತೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ

ಆದ್ದರಿಂದ 2022-23ನೇ ಸಾಲಿಗೆ ನನ್ನ ವೈಯುಕ್ತಿಕ ಜವಾಬ್ದಾರಿಯ ಆಧಾರದ ಮೇಲೆ ಒಂದು ವರ್ಷಕ್ಕೆ ಮಾತ್ರ ಸೀಮಿತಗೊಳಿಸಿ ಶಾಲಾ ಮಾನ್ಯತೆಯನ್ನು ನವೀಕರಣಗೊಳಿಸಿ ನೀಡುವಂತೆ ಕೋರಿದೆ.

ಒಂದು ವೇಳೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸುರಕ್ಷತಾ ಪ್ರಮಾಣ ಪತ್ರಗಳನ್ನು ಸಲ್ಲಿಸದಿದ್ದಲ್ಲಿ ಇಲಾಖೆ / ಸರ್ಕಾರವು ತೆಗೆದುಕೊಳ್ಳುವ ಕ್ರಮಕ್ಕೆ ಬದ್ಧನಾಗಿರುತ್ತೇನೆ ಎಂದು ಪ್ರಮಾಣೀಕರಿಸುತ್ತೇನೆ.